*

**ಓಎಸ್ ನಂಃ 50/2020**

**ಡಿಡಬ್ಲೂಃ 1**

**ಸಾಕ್ಷಿಗೆ ದಿನಾಂಕ 05-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ.ಎಸ್. ವಕೀಲರಿಂದ

ವಾದಿಯು ನನ್ನ ವಿರುದ್ಧ ನಾನು ಸಾಲ ತೆಗೆದುಕೊಂಡು ಕೆಲವೊಂದು ದಾಖಲೆಗಳ ಮೇಲೆ ಸಹಿ ಮಾಡಿ ಕೊಟ್ಟ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಈ ದಾವೆಯನ್ನು ನೀವು ಹೊಲ ಮಾರಾಟ ಮಾಡಿಕೊಡಲು ದಾಖಲೆ ಬರೆದುಕೊಟ್ಟ ಕಾರಣ ಸಲ್ಲಿಸಿದ್ದು ನೀವು ಎಂದಿಗೂ ವಾದಿಯಿಂದ ಸಾಲ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ನನಗೆ ಸಂಬಂಧಪಟ್ಟ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ನೀವು ವಾದಿಯ ವಿರುದ್ಧ ಒಂದು ದಾವೆಯನ್ನು ಚಿತ್ತಾಪುರದ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ದಾವೆಯನ್ನು ವಾದಿ ನನ್ನ ಜಾಗದಲ್ಲಿ ಬಂದು ಹೊಲ ಉಳಲು ಪ್ರಯತ್ನಿಸಿದ ಕಾರಣ ಸಲ್ಲಿಸಿರುತ್ತೇನೆ. ಸದರಿ ದಾವೆಯು ಈಗ ನಿಕಾಲಿಯಾಗಿರುತ್ತದೆ. ನಿಮ್ಮ ಪ್ರತಿವಾದ ಪತ್ರದಲ್ಲಿ ಆ ದಾವೆಯ ಕುರಿತು ನಮೂದು ಮಾಡಿದ್ದೀರಾ ಎಂದರೆ ಮಾಡಿದ್ದೇನೆ ಎಂದು ಹೇಳಿ ಈಗ ಸದರಿ ದಾವೆಯು ನನ್ನ ಪರವಾಗಿ ಆಗಿದ್ದು ಆದ ಕಾರಣ ಸದರಿ ದಾವೆ ನಿಕಾಲಿಯಾದ ಕುರಿತು ನಾನು ನನ್ನ ಪ್ರಮಾಣವಚನದಲ್ಲಿ ನಮೂದು ಮಾಡಿರುತ್ತೇನೆ. ಸಾಕ್ಷಿ ಮುಂದುವರಿದು ನಾನು ವಾದಿಗೆ ಎಗ್ರಿಮೆಂಟಿ ಆಫ್ ಸೇಲನ್ನು ಬರೆದುಕೊಟ್ಟಿದ್ದು ಆದರೆ ಅದು ನಾನು ಪಡೆದ ಸಾಲದ ಸೆಕ್ಯೂರಿಟಿಯಾಗಿ ನೀಡಿದ ಎಗ್ರಿಮೆಂಟಿ ಆಫ್ ಸೇಲ್ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ನಮೂದಾಗಿರುವ ದಾವಾ ಆಸ್ತಿಯ ಚಕ್ ಬಂದಿ ಸರಿಯಾಗಿದೆಯಾ ಎಂದರೆ ಸರಿ ಇದೆ ಎಂದು ನುಡಿಯುತ್ತಾರೆ. ನೀವು ವಾದಿಗೆ ಒಂದು ಎಕ್ರೆಗೆ ರೂ.1,38,000/- ಯಂತೆ ಮಾತುಕತೆ ಮಾಡಿ ದಾವಾ ಆಸ್ತಿಗೆ ರೂ.4,14,000/- ಕ್ಕೆ ಮಾತುಕತೆ ಮಾಡಿ ನಿಪಿ-1 ರಂತೆ ಕರಾರು ಪತ್ರ ಮಾಡಿಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನೀವು Sub-Registrar ಕಛೇರಿಯಲ್ಲಿ ರೂ.4,00,000/- ಹಣವನ್ನು ವಾದಿಯಿಂದ ಪಡೆದಿದ್ದೀರಿ ಎಂದರೆ ಸರಿ. ನೀವು ಉಳಿದ ರೂ.14,000/-ವನ್ನು ನಂತರ ಪಡೆದು ಖರೀದಿ ಪತ್ರವನ್ನು ಬರೆದುಕೊಡುತ್ತೇನೆಂದು ಹೇಳಿದ್ದೀರಿ ಎಂದರೆ ಸರಿಯಲ್ಲ. ನೀವು ರೂ.4,00,000/- ಹಣ ಪಡೆಯುವಾಗ ನಿಮ್ಮ ಮಗ ಸಹ ಅಲ್ಲಿದ್ದ ಎಂದರೆ ಸಾಕ್ಷಿ ಇರಬಹುದೆಂದು ನುಡಿಯುತ್ತಾರೆ. ನಿಪಿ-1ರ ಮೇಲೆ ನಿಮ್ಮ ಹೆಬ್ಬೆಟ್ಟಿನ ಗುರುತು, ನಿಮ್ಮ ಮಗನ ಸಹಿ ಮತ್ತು ವಾದಿ ಹಾಗೂ ಸಾಕ್ಷಿದಾರರ ಸಹಿ ಇದೆ ಎಂದರೆ ಸರಿ. ನಿಮ್ಮ ಮಗ ಡಿಗ್ರಿ ವರೆಗೆ ವಿದ್ಯಾಭ್ಯಾಸ ಮಾಡಿದ್ದಾನೆ ಎಂದರೆ ಸರಿ. ನಿಮ್ಮ ಮಗ ನಿಪಿ-1ಕ್ಕೆ

ಓದಿಯೇ ಸಹಿ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನೀವು ನಿಪಿ-1 ರಂತೆ ಖರೀದಿ ಪತ್ರ ಬರೆದುಕೊಟ್ಟಿಲ್ಲ ಆದ ಕಾರಣ ವಾದಿ ತನ್ನ ವಕೀಲರ ಮುಖಾಂತರ ಒಂದು ನೋಟೀಸನ್ನು ದಿಃ 08.12.2017ರಂದು ನೀಡಿದ್ದಾನೆ ಎಂದರೆ ನೋಟೀಸು ಬಂದಿದ್ದು ನಿಜ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ನಲ್ಲಿ ವಕೀಲರು 15 ದಿನಗಳಲ್ಲಿ ಖರೀದಿ ಪತ್ರ ಬರೆದುಕೊಡಬೇಕು ಎಂದು ನಮೂದು ಮಾಡಿದ್ದರು ಎಂದರೆ ಸಾಕ್ಷಿ ನಾನು ಯಾವುದೇ ಆಸ್ತಿಯನ್ನು ಮಾರಾಟ ಮಾಡುತ್ತೇನೆಂದು ವಾದಿಯೊಂದಿಗೆ ಕರಾರು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನೀವು ನೋಟೀಸ್ ನ ಬಗ್ಗೆ ಮತ್ತು ನಿಪಿ-1 ಕರಾರು ಪತ್ರದ ಬಗ್ಗೆ ನೀವು ಸಲ್ಲಿಸಿದ ದಾವೆಯಲ್ಲಿ ನಮೂದು ಮಾಡಿದ್ದೀರಿ ಎಂದರೆ ಸರಿ. ನೀವು ಸಲ್ಲಿಸಿದ ದಾವೆಯಲ್ಲಿ ವಾದಿ ಸಾಕ್ಷ್ಯ ನುಡಿದಿದ್ದಾನೆ ಎಂದರೆ ಸರಿ. ವಾದಿಯು ನಿಪಿ-1 ರಂತೆ ನೀವು ಖರೀದಿ ಪತ್ರ ಮಾಡಿಕೊಡಬೇಕೆಂದು ಸಾಕ್ಷ್ಯ ನುಡಿದಿದ್ದಾನೆ ಎಂದರೆ ಸರಿ. ಸಾಕ್ಷಿ ಸ್ವತಃ ಇಂದಿನವರೆಗೆ ನಾನು ಯಾವುದೇ ಸಾಲದ ಹಣವನ್ನು ವಾದಿಗೆ ಹಿಂತಿರುಗಿಸಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದ ಅಡಚಣೆಗಾಗಿ ನೀವು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಬೇಕೆಂದು ನಿಪಿ-1ರಂತೆ ಕರಾರು ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು ನಿಪಿ-1ರಂತೆ ನೋಂದಣಿ ಕಛೇರಿಯಲ್ಲಿ ರೂ.4,00,000/- ಹಣ ಪಡೆದು ಉಳಿದ 14,000/- ಹಣವನ್ನು ಖರೀದಿ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಪಡೆಯುವುದಾಗಿ ಒಪ್ಪಿ ನಿಪಿ-1ಕ್ಕೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಈಗ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಖರೀದಿ ಕರಾರು ಪತ್ರ ಮಾಡಿಕೊಟ್ಟರೂ ಸಹ ನೀವು ಪಡೆದ ಸಾಲಕ್ಕೆ security ಆಗಿ ನಿಪಿ-1ನ್ನು ಮಾಡಿಕೊಟ್ಟಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ತಕರಾರಿನಲ್ಲಿ ಮತ್ತು ನಿಮ್ಮ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ನಮೂದು ಮಾಡಿದ್ದೀರಿ ಎಂದರೆ ಸರಿಯಲ್ಲ. 2015ರಲ್ಲಿ ಮಾರುಕಟ್ಟೆ ಬೆಲೆಯಂತೆ ನೀವು ನಿಪಿ-1ನ್ನು ವಾದಿಗೆ ಮಾಡಿಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.